## ಕರ್ನಾಟಕ ಸರ್ಕಾರ

**ವಿಷಯ:-** ಶ್ರೀ ಪಕ್ಕೀರಸ್ವಾಮಿ.ಬಿ., ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸಿರಗುಪ್ಪ ಇವರ ಮಗುವಿನ ವೈದ್ಯಕೀಯ ವೆಚ್ಚ ಮರುಪಾವತಿ ಬಗ್ಗೆ.

**ಓದಲಾಗಿದೆ:-** 1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಪತ್ರ ಸಂಖ್ಯೆ: ಸರ್ಕಾರದ ಆದೇಶ ಸಂಖ್ಯೆ:ಜಿಪಂಬ /ಯೋನಿ/ ವೈವೆಮ/ ಇ-7048/2019, ದಿನಾಂಕ: 24.02.2020

2) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 31 ಎಸ್.ಎಂ.ಆರ್. 2014, ದಿನಾಂಕ:05.11.2015

**ಪ್ರಸ್ತಾವನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ , ಬಳ್ಳಾರಿ ಇವರು ಮೇಲೆ ಕ್ರಮ ಸಂಖ್ಯೆ(1)ರ ದಿನಾಂಕ:24.02.2020ರ ಪತ್ರದಲ್ಲಿ ಶ್ರೀ ಪಕ್ಕೀರಸ್ವಾಮಿ.ಬಿ., ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸಿರಗುಪ್ಪ ಇವರು ತಮ್ಮ ಮಗವಿನ ಅನಾರೋಗ್ಯದ ಸಂಬಂಧ RAINBOW CHILDRENS HOSPITAL, ಹೈದ್ರಾಬಾದ್ ಇಲ್ಲಿ ದಿನಾಂಕ:19.07,2019 ರಿಂದ 12.08.2019ರ ವರೆಗೆ ಚಿಕಿತ್ಸೆಗೆ ಒಳಪಡಿಸಿದ್ದು. ಇದಕ್ಕೆ ರೂ.8,15,102/-ಗಳು ವೆಚ್ಚವಾಗಿದ್ದು. ಸದರಿ ಆಸ್ಪತ್ರೆ ಸರ್ಕಾರದಿಂದ ಮಾನ್ಯತೆ ಹೊಂದದ ಇರುವ ಹೊರರಾಜ್ಯದ ಖಾಸಗಿ ಆಸ್ಪತ್ರೆಯಾದ ಕಾರಣ ಒಟ್ಟಾರೆ ಚಿಕಿತ್ಸೆಗೆ ವೆಚ್ಚವಾದ ಪೈಕಿ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ದೃಡೀಕರಿಸಿರುವಂತೆ ಮರುಪಾವತಿಸಬಹುದಾದ ಅರ್ಹತಾ ಮೊತ್ತ ರೂ.1,89,067/-ಗಳನ್ನು ಮರುಪಾವತಿಸಲು ವಿಶೇಷ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಸರ್ಕಾರದ ಆದೇಶ ದಿನಾಂಕ:05.11.2015ರಲ್ಲಿ ತಿಳಿಸಿರುವ ಅಂಶಗಳ ಅನ್ವಯ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀ ಪಕ್ಕೀರಸ್ವಾಮಿ.ಬಿ., ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸಿರಗುಪ್ಪ ಇವರು ತಮ್ಮ ಮಗವಿನ ಅನಾರೋಗ್ಯದ ಸಂಬಂಧ RAINBOW CHILDRENS HOSPITAL, ಹೈದ್ರಾಬಾದ್ ಇಲ್ಲಿ ದಿನಾಂಕ:19.07.2019 ರಿಂದ 12.08.2019ರ ವರೆಗೆ ಚಿಕಿತ್ಸೆಗೆ ಒಳಪಟ್ಟಿದ್ದು. ಇದೊಂದು ಗಂಬೀರ ಸ್ವರೂಪದಹಾಗೂ ರೋಗಿಯ ಜೀವನ್ಮರಣ ಹೋರಾಟದ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದಿಂದ ಮಾನ್ಯತೆ ಹೊಂದಿಲ್ಲದ ಹೊರರಾಜ್ಯದ ಖಾಸಗಿ ಆಸ್ಪತ್ರೆಯಾದ RAINBOW CHILDRENS HOSPITAL, ಹೈದ್ರಾಬಾದ್ ಇಲ್ಲಿ ಚಿಕಿತ್ಸೆ ಪಡೆದಿರುವುದುನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ನೀಡಿರುವ ಅಭಿಪ್ರಾಯದನುಸಾರ ಸದರಿ ಚಿಕಿತ್ಸಾ ವೆಚ್ಚದ ಪೈಕಿ ಮರುಪಾವತಿಸಬಹುದಾದ ಅರ್ಹತಾ ಮೊತ್ತವೆಂದು ರೂ.1,89,067/-ಗಳನ್ನು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ80 ಜಿಪಅ2020 ಬೆಂಗಳೂರು ದಿನಾಂಕ:20.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ಸರ್ಕಾರಿ ನೌಕರರ(ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯ 31ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14ನ್ನು ಸಡಿಲಿಸಿ ಶ್ರೀ ಪಕ್ಕೀರಸ್ವಾಮಿ.ಬಿ., ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸಿರಗುಪ್ಪ ಇವರು ತಮ್ಮ ಮಗವಿನ ಅನಾರೋಗ್ಯದ ಸಂಬಂಧ RAINBOW CHILDRENS HOSPITAL, ಹೈದ್ರಾಬಾದ್ ಇಲ್ಲಿ ಚಿಕಿತ್ಸೆ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸದರಿ ಚಿಕಿತ್ಸಾ ವೆಚ್ಚದ ಪೈಕಿ

ರೂ.1,89,067/-ಗಳನ್ನು ( ಒಂದು ಲಕ್ಷದ ಎಂಬತರೊಂಬತ್ತು ಸಾವಿರದ ಅರವತ್ತೇಳು ರೂಪಾಯಿಗಳು ಮಾತ್ರ) ಗಳನ್ನು ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಿದೆ.

ಸದರಿ ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು
ಅವರ ಹೆಸರಿನಲ್ಲಿ

20/04/2020

(ಎಸ್.ರಂಗನಗೌಡ)

ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
3. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ- ವೈದ್ಯಕೀಯ ವೆಚ್ಚದ ಮೂಲ ಬಿಲ್ಲುಗಳನ್ನು ಲಗತ್ತಿಸಿದೆ. ನೋಂದಣಿ ಅಂಚೆ ಮುಖಾಂತರ
6. ಶ್ರೀ ಪಕ್ಕೀರಸ್ವಾಮಿ.ಬಿ., ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಸಿರಗುಪ್ಪ.

ಪ್ರತಿಯನ್ನು:

1. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಉಪಕಾರ್ಯದರ್ಶಿಗಳು